ಇ) ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಶೇಕಡಾ 80 ರಷ್ಟು ಈ ಭಾಗದ ಜನರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಸರ್ಕಾರ ನಿರ್ಧಾರ ಮಾಡಿರುವುದು ನಿಜವೇ ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) ಹೌದು.

ಆ) ಸರ್ಕಾರವು ಇಂಜಿನಿಯರುಗಳ ನೇಮಕಾತಿ ಬಗ್ಗೆ ನೇಮಕಾತಿ ಸಮಿತಿಯನ್ನು ರಚಿಸಿದ್ದು, ಈ ವಿಷಯದಲ್ಲಿ ಕಾರ್ಯೋನ್ಮುಖವಾಗಿದೆ.

ಇ) ಸರ್ಕಾರಿ ಆದೇಶಗಳ ಅನ್ವಯ ಶೇಕಡಾ 75 ಭಾಗ ಹುದ್ದೆಗಳನ್ನು ಕೃಷ್ಣಾ ಮೇಲ್ದಂಡೆ ಯೋಜನೆ ಭಾಗದಲ್ಲಿ ಇರುವ ಅಭ್ಯರ್ಥಿಗಳಿಗೆ ನಿಗದಿಪಡಿಸಿದೆ.

ಬೆಳಗಾವಿ ಜಿಲ್ಲೆಯ ಕಾಡಾದವರಿಂದ ಹಣ ಮಂಜೂರಾತಿ

180 (986): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):–

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯ ಕಾಡಾದವರು ಈ ವರ್ಷ ಎಷ್ಟು ಎಷ್ಟು ಹಣವನ್ನು ಯಾವ ಯಾವ ಕೆಲಸಗಳಿಗೆ ಒದಗಿಸಿರುವುದು ಹಾಗೂ ಈ ವರ್ಷ ಇಲ್ಲಿಯವರೆಗೆ ಯಾವ ಯಾವ ಕೆಲಸಕ್ಕಾಗಿ ಎಷ್ಟು ಎಷ್ಟು ಹಣವನ್ನು ಖರ್ಚು ಮಾಡಿರುವರು; (ಕೆಲಸದ ಹೆಸರು ಹಾಗೂ ಎಲ್ಲ ಸಂಪೂರ್ಣ ವಿವರ ಕೊಡುವುದು);

ಆ) ಕಾಡಾ ಅಧಿಕಾರಿಗಳು ಈ ವರ್ಷ ಹೊಲ ಸಮಪಾತಳಿ ಮಾಡುವ ಸಲುವಾಗಿ ಎಷ್ಟು ಕೆಲಸಗಳಿಗೆ ಒಪ್ಪಿಗೆ ನೀಡಿರುವರು; (ಕೆಲಸದ ಹೆಸರು ಮತ್ತು ಬ್ಯಾಂಕಿನಿಂದ ಹಣ ಒದಗಿಸಿದ್ದಲ್ಲಿ ಬ್ಯಾಂಕಿನ ಹೆಸರು ಎಲ್ಲ ಸಂಪೂರ್ಣ ವಿವರ ಕೊಡುವುದು);

ಇ) ಒಂದು ವೇಳೆ ಹೊಲ ಸಮಪಾತಳಿ ಮಾಡುವ ಸಲುವಾಗಿ ಕಾಡಾ ಅಧಿಕಾರಿಗಳು ಯಾವುದೇ ಕೆಲಸ ತೆಗೆದುಕೊಳ್ಳದೇ ಇದ್ದಲ್ಲಿ ಅಂಥ ಅಧಿಕಾರಿಗಳ ಮೇಲೆ ಸರ್ಕಾರದವರು ಯಾವ ಕ್ರಮ ಕೈಗೊಳ್ಳುವರು;

ಈ) ಮಾನ್ಯ ಕಂದಾಯ ಸಚಿವರು ಅಧ್ಯಕ್ಷತೆಯಲ್ಲಿ ಬೆಳಗಾವಿ ಜಿಲ್ಲಾಧಿಕಾರಿಗಳವರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಅತೀವೃಷ್ಟಿಯಿಂದ ಹಾನಿಗೊಳಗಾದ ಬೈಲಹೊಂಗಲ ತಾಲೂಕಿನ ಉಡಕೇರಿ ಗ್ರಾಮದ ಜನರು ಕಾಡಾ ಇಲಾಖೆಯಿಂದ ತೆಗೆದುಕೊಂಡ ಸಾಲವನ್ನು ಸೂಟ ಬಿಡಬೇಕೆಂದು ನಿರ್ಣಯಿಸಿದ್ದು ಈ ಬಗ್ಗೆ ಕಾಡಾ ಅಧಿಕಾರಿಗಳು ಸೂಟ ಬಿಡಲು ಯಾವ ಕ್ರಮ ಕೈಗೊಂಡಿರುವರು;

ಉ) ಹಾಗಿದ್ದಲ್ಲಿ ಮಾನ್ಯಮಂತ್ರಿಗಳ ಆದೇಶದ ಪ್ರಕಾರ ಇನ್ನೂವರೆಗೂ ಯಾವುದೇ ಕ್ರಮ ಕೈಗೊಳ್ಳದೇ ಇದ್ದಲ್ಲಿ ಇನ್ನು ಮೇಲೆ ಆದರೂ ರೈತರ ಸಾಲವನ್ನು ಸೂಟ ಬಿಡುವ ಸಲುವಾಗಿ ಸರ್ಕಾರದವರು ಕ್ರಮ ಕೈಗೊಳ್ಳುವುದೇ ?

ಶ್ರೀರಂಗದೇವರಾಯಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):–

ಅ) ಕಾಡಾ, ಘಟಪ್ರಭಾ ಮತ್ತು ಮಲಪ್ರಭಾ ಯೋಜನೆ, ಬೆಳಗಾವಿ ಆಡಿಯಲ್ಲಿ ಈ ವರ್ಷ ತೆಗೆದುಕೊಂಡ ಕೆಲಸಗಳ ವಿವರ ಅದಕ್ಕಾಗಿ ಒದಗಿಸಿರುವ ಹಣ ಹಾಗೂ ಇದುವರೆಗೆ ಆ ಕೆಲಸಗಳಿಗೆ ಖರ್ಚಾದ ಹಣದ ವಿವರಗಳನ್ನು ಅನುಬಂಧ – 1 ರಲ್ಲಿ ಒದಗಿಸಲಾಗಿದೆ.

ಆ) ಈ ವರ್ಷ 12,000 ಹೆ.ರಷ್ಟು ರೈತರ ಭೂಮಿಯನ್ನು ಸಮಪಾತಳಿ ಮಾಡುವ ಯೋಜನೆಯನ್ನು ಕಾಡಾ ಅಧಿಕಾರಿಗಳು ಹಾಕಿಕೊಂಡಿರುತ್ತಾರೆ. ಹೂಲ ಸಮಪಾತಳಿ ಕೆಲಸದ ಸಲುವಾಗಿ ಈ ವರ್ಷ ಬ್ಯಾಂಕುಗಳು ಕಾಡಾದ ಮೂಲಕ ಇಮವರೆಗೆ ಯಾವುದೇ ಹಣ ಒದಗಿಸಿರುವುದಿಲ್ಲ.

ಇ) ಈ ವರ್ಷ 12,000 ಹೆ.ರಷ್ಟು ರೈತರ ಭೂಮಿಯನ್ನು ಸಮಪಾತಳಿ ಮಾಡುವ ಯೋಜನೆ ಹಾಕಿಕೊಂಡಿದ್ದು ಇದುವರೆಗೆ 5223 ಹೆ.ರಷ್ಟು ಪ್ರಗತಿ ಸಾಧಿಸಿದೆ ಹಾಗೂ ಈ ಬಗ್ಗೆ ಇನ್ನೂ ಹೆಚ್ಚಿನ ಪ್ರಗತಿ ಸಾಧಿಸಲು ಅಧಿಕಾರಿಗಳು ಕ್ರಮ ಜರುಗಿಸುತ್ತಿರುವುದರಿಂದ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಮಾನ್ಯ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳ ಬಗ್ಗೆ ಮಾಹಿತಿಯು ಕಾಡಾಕ್ಕೆ ಇದುವರೆಗೂ ಬಂದಿರುವುದಿಲ್ಲ. ಆದರೆ ಈ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳು 11-2-93ರಂದು ಕಾಡಾದ ಗಮನಕ್ಕೆ ಬಂದಿದ್ದು ಈ ವಿಷಯದ ಬಗ್ಗೆ ಕಾಡಾ ಅಧಿಕಾರಿಗಳು ಸೂಕ್ತ ಮಾಹಿತಿ ಸಂಗ್ರಹಿಸಿ ವರದಿಯನ್ನು ಸರ್ಕಾರಕ್ಕೆ ಕಳುಹಿಸುವಲ್ಲಿ ಕಾರ್ಯತತ್ಪರರಾಗಿದ್ದಾರೆ.

ಉ) ಕಾಡಾ ಅಧಿಕಾರಿಗಳು ಈ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿರುವುದರಿಂದ ಇವರಿಂದ ಈ ಬಗ್ಗೆ ವರದಿ ಬಂದ ಕೂಡಲೇ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಅನುಬಂಧ – 1

ಮಲಪ್ರಭಾ ಮತ್ತು ಘಟಪ್ರಭಾ, ಕಾಡಾ, ಬೆಳಗಾಂ

1992–93ನೇ ಸಾಲಿನಲ್ಲಿ ತೆಗೆದುಕೊಂಡ ಕೆಲಸಗಳ ವಿವರ, ಅದಕ್ಕಾಗಿ ಒದಗಿಸಿರುವ ಹಣ ಹಾಗೂ ಇದುವರೆವಿಗೂ ಕೆಲಸಗಳಿಗೆ ಖರ್ಚಾದ ಹಣದ ವಿವರ:

ಕ್ರ.ಸಂ.	ಕೆಲಸದ ವಿವರ	ವಾರ್ಷಿಕ ಕಾರ್ಯಕ್ರಮ 1992–93	ಪ್ರಗತಿ
1.	ಕಾಡಾ ಸಿಬ್ಬಂದಿ ವೇಚ್ಚ	40.00	32.52
2.	ಅಂತರ್ಜಲ ಸಮೀಕ್ಷೆ ಮತ್ತ ಅನ್ವೇಷಣೆ	2.00-	3.41
3.	ಭೂ ಅಭಿವೃದ್ಧಿ ಕೆಲಸ	200.00	142.93
4.	ಜಮೀನಿನ ನೀರಾವರಿ ಮತ್ತು ಕಾಲುವೆಗಳ ನಿರ್ಮಾಣ	200.00	49.96
5.	ಸಣ್ಣ ಮತ್ತು ಮಧ್ಯಮ ಹಿಡುವಳಿದಾರರಿಗೆ ಸಬ್ಸಿಡಿ	4.00	0.50
6.	ನಾರಾಬಂದಿ	40.00	12.35
7.	ಅಳವಡಿಕೆ ಮತ್ತು ಪ್ರತ್ಯಕ್ಷತೆ	4.00	–
8.	ಯೋಜನೆ ಅಭ್ಯಾಸ ಮತ್ತು ಸಂಶೋಧನೆ	3.00	–
9.	ಬಸಿಗಾಲುವೆಗಳು	20.00	–
10.	ವಿಶೇಷ ಘಟಕ ಯೋಜನೆ	44.48	–

11.	ಆಯಕಟ್ ರಸ್ತೆಗಳು	45.00	20.49
12.	ವಸತಿ ಸೌಲಭ್ಯ	5.00	0.98
13.	ಉಗ್ರಾಣಗಳನ್ನು ಕಟ್ಟುವುದು	2.00	–
14.	ರೈತ ಭಾಗವಹಿಸುವಿಕೆ ಮತ್ತು ನಿರ್ವಹಣೆ	1.00	–
15.	ಜವಳು ಭೂಮಿಯನ್ನು ಕೃಷಿಯೋಗ್ಯ ಮಾಡುವಿಕೆ	2.00	–
16.	ಭೂ ಅಭಿವೃದ್ಧಿ ತರಬೇತಿ ಕೇಂದ್ರ	–	–
17.	ಭೂ ಆಂತರ್ಜಲ ಸಂಶೋಧನೆ	2.00	–
18.	ಇತರೆ	5.00	3.25
	ಒಟ್ಟು	629.48	265.40

ಶಹಾಪುರ–ಶೋರಾಪುರ ಕ್ಷೇತ್ರಕ್ಕೆ ಸೇರಿದ ರಸ್ತೆಗಳ ದುರಸ್ತಿ

176 (1033): ಶ್ರೀ ಶಿವಶೇಖರಪ್ಪ ಗೌಡ ಶಿರವಾಳ, (ಶಹಾಪುರ):–

ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಹಾಪುರ–ಶೋರಾಪುರ ಕ್ಷೇತ್ರಕ್ಕೆ ಸೇರಿದ ಸುರಪುರ ಕಂಭಾವಿ ಲೋಕೋಪಯೋಗಿ ರಸ್ತೆ ಹಾಳಾಗಿದ್ದು, ಇದನ್ನು ನೀರಾವರಿ ಇಲಾಖೆಯವರು ವಹಿಸಿಕೊಂಡಿರುವರೆ;

ಆ) ಹಾಗಿದ್ದಲ್ಲಿ, ಇದನ್ನು ಕೃಷ್ಣಾ ಮೇಲ್ದಂಡೆ (ಪ್ರಚ್ಚುಕಟ್ಟು ರಸ್ತೆ) ಯೋಜನೆಯಲ್ಲಿ ಕೈಕೊಳ್ಳಲಾಗುವುದೇ;

ಇ) ದುರಸ್ತಿ ಕಾಮಗಾರಿಯನ್ನು ಯಾವಾಗ ಕೈಗೊಳ್ಳಲಾಗುವುದು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) ಈ ರಸ್ತೆಯು ಸಧ್ಯಕ್ಕೆ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿದ್ದು ಇದನ್ನು ನೀರಾವರಿ ಇಲಾಖೆಯ ಕೃಷ್ಣ ಮೇಲ್ದಂಡೆ ಯೋಜನೆಗೆ ಹಸ್ತಾಂತರಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಆ) ಈ ದಿಕ್ಕಿನಲ್ಲಿ ಆದಷ್ಟು ಶೀಘ್ರವಾಗಿ ನಿರ್ಧಾರ ತೆಗೆದುಕೊಳ್ಳಲಾಗುವುದು.

ಇ) ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ಈ ರಸ್ತೆಯ ಸುಧಾರಣೆಯ ಕಾಮಗಾರಿಯನ್ನು 1994-95ರಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಸರ್ಕಾರದಲ್ಲಿ ಹರಿಜನ – ಗಿರಿಜನರನ್ನು ವಕೀಲರನ್ನಾಗಿ ನೇಮಕ.

178 (754): ಶ್ರೀ ಕರಿಯಣ್ಣ (ಹೊಳೇಹೊನ್ನೂರು):–

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಎಷ್ಟು ವಕೀಲರನ್ನು ಕೋರ್ಟುಗಳಲ್ಲಿ ಸರ್ಕಾರಿ ವಕೀಲರನ್ನಾಗಿ ನೇಮಕ ಮಾಡಲಾಗಿದೆ;

ಆ) ಅವರಲ್ಲಿ ಹರಿಜನ–ಗಿರಿಜನರ ಸಂಖ್ಯೆ ಎಷ್ಟು;